## 27

# ಕರ್ತನ ಶಿಸ್ತು

# (12:4-11)

ಇಬ್ರಿಯ ಪತ್ರಿಕೆಯ ಓದುಗರು ಅನೇಕ ವಿಧವಾದ ಸಂಕಷ್ಟಕ್ಕೆ ಒಳಗಾಗಿದ್ದರು (10:32-34). ಆದ್ದರಿಂದ ಅವರುಗಳು ಹಿಂಜರಿದು ಹೋಗುವ ಸಾಧ್ಯತೆಯಿತ್ತು. ಈ ವಾಕ್ಯಭಾಗದಲ್ಲಿ ಸಂಕಷ್ಟದ ನಡುವೆಯೂ, ಭಕ್ತಿಯ ಜೀವನವನ್ನು ಜೀವಿಸಬೇಕೆಂದು ಪ್ರೋತ್ಸಾಹಿಸಲಾಗಿದೆ. ಯೇಸುವಿಗೆ ಹೋಲಿಕೆ ಮಾಡಿದರೆ ಅವರ ಸಂಕಷ್ಟಗಳು ಅಲ್ಪವೇ ಆಗಿದ್ದವು (ವಚನ 4). ಎರಡನೆಯದಾಗಿ ಅವನು ಹಳೆ ಒಡಂಬಡಿಕೆಯ ವ್ಯಾಖ್ಯಾನದಿಂದ (ವಚನಗಳು 5, 6; ಯಾಕೋಬ 5:17; ಜ್ಞಾನೋಕ್ತಿ 3:11, 12). ಪ್ರಮುಖವಾದ ನಿಯಮಗಳನ್ನು ತಿಳಿಸಿರುವನು. ತನ್ನನ್ನು ಪ್ರೀತಿಸುವವರನ್ನು ದೇವರು ಶಿಕ್ಷಿಸುತ್ತಾನೆ. ಕರ್ತನು ನೀಡುವ ಶಿಸ್ತಿನ ವಿಷಯವಾಗಿ ಈ ಪಾಠದಲ್ಲಿ ಗಮನಿಸೋಣ ಇದು ಸುಲಭವಾದ ಪಠ್ಯವಲ್ಲ, ಆದರೆ, ಅದರಲ್ಲಿ ಅಡಗಿರುವ ಬೆಳಕಿನ ನಿಮಿತ್ತವಾಗಿ ಅದನ್ನು ಅನುಸರಿಸುವದು ಯೋಗ್ಯವಾಗಿದೆ. ದೇವರ ಶಿಕ್ಷೆ ಏನು ಎಂಬುದಾಗಿ ವಾಕ್ಯದ ಮೂಲಕ ಚರ್ಚಿಸೋಣ. ದೇವರು ಏಕೆ ಶಿಕ್ಷಿಸುತ್ತಾನೆ, ದೇವರ ಆ ಶಿಸ್ತಿಗೆ, ನಾವುಗಳು ಹೇಗೆ ಪ್ರತಿಕ್ರಿಯಿಸಬೇಕು ಎಂದು ತಿಳಿಯೋಣ.

### ಅದೇನಾಗಿದೆ?

12:4-11ರಲ್ಲಿ, ಲೌಕಿಕ ತಂದೆಯನ್ನು, ಪರಲೋಕದ ತಂದೆಗೆ ಹೋಲಿಸಲಾಗಿದೆ. ಸಹಜವಾಗಿ, ಲೌಕಿಕ ತಂದೆಗಳು ನೀಡುವಂತ ಶಿಕ್ಷೆಯನ್ನೇ, ಪರಲೋಕದ ದೇವರು ಸಹ ನೀಡುವವನಾಗಿದ್ದಾನೆ, ಕೆಲವು ವ್ಯತ್ಯಾಸಗಳು ಮಾತ್ರ ಇರುತ್ತವೆ.

**ಲೌಕಿಕ ತಂದೆಯರು**

ಹಳೆಯ ಹಾಗೂ ಹೊಸ ಒಡಂಬಡಿಕೆಯಲ್ಲಿನ ತಂದೆಗಳು ತಮ್ಮ ಮಕ್ಕಳನ್ನು ಶಿಕ್ಷಿಸ ಬೇಕಿತ್ತು (ಜ್ಞಾನೋಕ್ತಿ 13:1; 19:18; ಎಫೆಸ 6:4). "ಶಿಕ್ಷೆ" ಎಂದರೆ (ಪೈದಿಯಾ) ಕ್ರಿಯಾ ಪದದಲ್ಲಿ "ಮಗು" (ಪಯಾಸ್) ಅಂದರೆ "ಮಗುವನ್ನು ಶಿಕ್ಷಿಸು" ಅದರಲ್ಲಿ "ಕೃಪೆ ಹಾಗೂ ದೃಢತೆಯು"[1] ಇರಬೇಕು ಅಗತ್ಯವಿರುವ ಶಿಸ್ತಿಗೆ ಒಳಪಡಿಸಬೇಕು.

ಪ್ರಾಥಮಿಕವಾಗಿ ಎರಡು ವಿಧಧ ಶಿಸ್ತುಗಳಿವೆ: ತಪ್ಪಿಸುವದು ಹಾಗೂ ಸರಿಪಡಿಸುವದು ತಪ್ಪಿಸುವದು ಅಂದರೆ, ಮಗು ತಪ್ಪುಮಾಡದಂತೆ ತಡೆಯುವದು ಅದರಲ್ಲಿ ಉಪದೇಶ ಹಾಗೂ ಎಚ್ಚರಿಕೆ ಅಡಕವಾಗಿದೆ. ಮಗುವಿನ ಸಾಮರ್ಥ್ಯದ ಪ್ರಕಾರ ಶಿಸ್ತನ್ನು ನೀಡಬೇಕು (ನನ್ನ ತಂದೆಯು ಸಹ ನಾನು ಕೆಲವು ಕೆಲಸಗಳು ಪೂರ್ಣಮಾಡಬೇಕು ಎಂಬ ಶಿಸ್ತಿಗೆ ಒಳಪಡಿಸುತ್ತಿದದ್ದನ್ನು ನಾನು ನೆನಪಿಸುತ್ತೇನೆ).

ಮಗು ತಪ್ಪನ್ನು ಮಾಡಿದ ನಂತರ, ಅದನ್ನು ಶಿಸ್ತಿಗೆ ನಡೆಸಿ ತಿದ್ದುವದು ಇನ್ನೊಂದು ಕ್ರಮವಾಗಿದೆ. ಮಾಡಿದ ತಪ್ಪಿಗೆ ಅದು ಶಿಕ್ಷೆಯನ್ನು ಅನುಭವಿಸಬೇಕು (ನಾನು ಸಹ ಈ ಅನುಭವವನ್ನು ಹೊಂದಿದ್ದೆ).

**ಪರಲೋಕದ ತಂದೆ**

ತಂದೆಯಾದ ದೇವರು ನೀಡುವ ಶಿಕ್ಷೆಯಲ್ಲಿ, ತಡೆಗಟ್ಟುವ ಹಾಗೂ ಸರಿಪಡಿಸುವ ಕ್ರಮವು

ಇರುತ್ತದೆ. ಯೆಹೂದ್ಯ ಕ್ರೈಸ್ತರು ಈ ವಿಚಾರನ್ನು ಅರಿತವರಾಗಿದ್ದರು. ಅವರ ಪೂರ್ವಿಕರು ಅರಣ್ಯದಲ್ಲಿ, ಆ ಶಿಕ್ಷೆಗೆ ಒಳಗಾಗಿದ್ದರು. ಸಿನಾಯಿ ಪರ್ವತದಲ್ಲಿ ಅವರು ದೇವರ ಬಲವನ್ನು ನೋಡಿದಾಗ, ಅವರು ತಡೆಗಟ್ಟುವ ಶಿಸ್ತನ್ನು ಹೊಂದಿದರು (ಧರ್ಮೋಪದೇಶಕಾಂಡ 4:36). ಅವರನ್ನು ತಿದ್ದುವದಕ್ಕಾಗಿ ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಶಿಸ್ತಿಗೆ ಒಳಪಟ್ಟರು (ಧರ್ಮೋಪದೇಶಕಾಂಡ 8:2-5).[2] ಇವೆರಡು ಶಿಸ್ತಿನಲ್ಲೂ, ಇಸ್ರಾಯೇಲ್ಯರ ಒಳಿತು ಅಡಕ ವಾಗಿತ್ತು.

ದೇವರು ತನ್ನ ವಾಕ್ಯದ ಮೂಲಕ ತಡೆಗಟ್ಟುವ ಹಾಗೂ ತಿದ್ದುವ ಶಿಸ್ತನ್ನು ನೀಡುತ್ತಾನೆ (ಜ್ಞಾನೋಕ್ತಿ 6:23). ಸರಿ ತಪ್ಪುಗಳನ್ನು ದೇವರ ಪ್ರೇರಿತ ವಾಕ್ಯಗಳಿಂದ ತಿಳಿಯುತ್ತೇವೆ. ಅದರ ಪರಿಣಾಮಗಳನ್ನು ಸಹ ಅದು ತಿಳಿಸುತ್ತದೆ. ಈ ಹೊಣೆಗಳಿಂದ ಒಬ್ಬನು ವೃದ್ಧಿಯಾಗುವ ಸಾಧ್ಯತೆಯಿದೆ. ನಾವು ತಪ್ಪುವಾಗ ವಾಕ್ಯವು ನಮ್ಮನ್ನು ತಿದ್ದುತ್ತದೆ. ನಾವು ಅವಿಧೇಯರಾದರೆ. ನಿಯಮದ ಪ್ರಕಾರ ಪರಿಣಾಮವನ್ನು ಎದುರಿಸುತ್ತೇವೆ.

ಇಬ್ರಿಯ ಮೂಲ ಓದುಗರಲ್ಲಿ ಒಂದು ನಿರ್ಧಿಷ್ಟವಾಗಿದ್ದ, ಹಾಗೂ ಕಷ್ಟಕರವಾಗಿದ್ದ ಶಿಸ್ತಿನ ಬಗ್ಗೆ ಉಲ್ಲೇಖಿಸಲಾಗಿದೆ, "ಅದರ ನಿಮಿತ್ತವಾಗಿ ಅವರು ದುಃಖಕ್ಕೊಳಗಾಗಿದ್ದರು" (ವಚನ 11). ಅವರು ಕ್ರೈಸ್ತರಾದ ಕಾರಣದಿಂದ ಈ ಸಮಸ್ಯೆ ಉದ್ಭವಿಸಿರಬಹುದು. ಅವರು ಹಿಂಸೆಗೆ ಸಹ ಒಳಗಾಗಿದ್ದರು (ವಚನ 4ಎ). ದೇವರು ಹಿಂಸೆಯನ್ನು ನೀಡುವ ಮೂಲಕ ಶಿಸ್ತಿಗೆ ಒಳಪಡಿಸುತ್ತಾನೆಯೇ ಎಂಬ ಪ್ರಶ್ನೆಯನ್ನು ಒಬ್ಬನು ಕೇಳ ಬಹುದು? ಇಲ್ಲ ಆದರೆ, ಕಷ್ಟದ ಅನುಭವವು ಶಿಸ್ತಿನ ಒಂದು ಭಾಗವಾಗಿದೆ.[3] (ಇದು ಕಷ್ಟದ ಪಾಠವಾಗಿದೆ ನಾನು ಹೇಳಿ ದ್ದೇನೆ!)

ಈ ಆಲೋಚನೆಯನ್ನು ನಾನು ಸೇರಿಸುತ್ತೇನೆ: ಕೆಲವು ಕೆಟ್ಟವುಗಳು ಸಂಭವಿಸಿದಾಗ, ಅದನ್ನು ಅರಿಯುವದು ಕಷ್ಟಕರವಾಗಿದೆ. ಅದು ನಮ್ಮದೇ ಸ್ವಭಾವದ ನಿಮಿತ್ತ ಉಂಟಾಗದೆ ಇದ್ದರೆ, ಅದನ್ನು ಸೈತಾನನೋ ಅಥವಾ ದೇವರು ಮಾಡಿರುವ ಸಂಗತಿಯೇ ಎಂದು ಅರಿಯಲು ಅಸಾಧ್ಯವಾಗುತ್ತದೆ. ಅಥವಾ ಇದು ಪಾಪದ ಜಗತ್ತಿನ ಅಪಾಯವೋ ಎಂದು ಅರಿಯಲಾಗುವದಿಲ್ಲ. ಒಂದು ವೇಳೆ ಇದು ದೇವರಿಂದ ಆಗಿದ್ದರೆ, ಆತನ ಉದ್ದೇಶವನ್ನು ಅರಿಯಲು ಆಗುವದಿಲ್ಲ (ಯೆಶಾಯ 55:8, 9). ಆದರೆ ಆತನು ಎಲ್ಲವನ್ನು ನಮ್ಮ ಹಿತಕ್ಕಾಗಿಯೇ ಮಾಡುತ್ತಾನೆ.

ಹೇಗಿದ್ದರೂ, ನಾವುಗಳು ಕೆಲವು ಸತ್ಯಾಂಶಗಳನ್ನು ಅರಿಯಬಹುದಾಗಿದೆ. ನಮ್ಮ ಹಾದಿಯಲ್ಲಿ ಬಂದೋದಗುವ ಕಷ್ಟಗಳ ಮೂಲಕ ದೇವರು ಒಳ್ಳೆಯದನ್ನೇ ಮಾಡಬಹುದು (ರೋಮಾಪುರ 8:28). ದೇವರ ಸಹಾಯದಿಂದ ನಾವುಗಳು ಅದರಲ್ಲಿ ಜಯಗಳಿಸಬಹುದು (ಇಬ್ರಿಯ 13:5ಬಿ, 6).[4] ಆತನು ನಮ್ಮನ್ನು ಪ್ರೀತಿಸುತ್ತಿರುವದರಿಂದ, ಈ ಕಷ್ಟಗಳು ನಮಗೆ ಓದಗಿರಬಹುದೆಂದು ಅರಿಯಬೇಕಾಗುತ್ತದೆ.

## ಏಕೆ ದೇವರು ನಮ್ಮನ್ನು ಶಿಕ್ಷೆಗೆ ಒಳಪಡಿಸುತ್ತಾನೆ?

ಶಿಸ್ತಿನ ಅಗತ್ಯತೆ ಏನು? ದೇವರು ನಮಗೆ ಸಕಲವನ್ನು ನೀಡುವದರಿಂದ, ದೇವರು ನಮ್ಮನ್ನು ಶಿಕ್ಷಿಸುತ್ತಾನೆ ಎಂಬುದು ಕೆಲವರ ಅಭಿಪ್ರಾಯವಾಗಿದೆ. ಕೆಲವರು ದೇವ ಭಕ್ತಿಯ ಜೀವಿತ ಇಲ್ಲದಿದ್ದರೂ ದೇವರು "ನಾನು *ಸಂತೋಷಪಡಬೇಕೆಂದು*" ಹೇಳುತ್ತಾರೆ!

### ಲೌಕಿಕ ತಂದೆಯರು

ಲೌಕಿಕ ತಂದೆಯರು ತಮ್ಮ ಮಕ್ಕಳು ಆನಂದದಿಂದ ಇರಬೇಕೆಂದು ಬಯಸುತ್ತಾರೆ. ಆದರೆ ಉತ್ತಮರಾದ ತಂದೆಗಳು, ಮಕ್ಕಳ ಬಗ್ಗೆ ಉತ್ತಮವಾದದ್ದನ್ನು ಬಯಸುತ್ತಾರೆ. ಅವರು ಬೆಳೆದು, ಪರಿಪಕ್ವ ಹೊಂದಿದವರಾಗಬೇಕೆಂದು ಬಯಸುತ್ತಾರೆ. ತಮ್ಮ ಮಕ್ಕಳು ನಂಬಿಗಸ್ತರಾದ ಸ್ತ್ರೀ

ಪುರುಷರಾಗಬೇಕೆಂದು ಬಯಸುತ್ತಾರೆ. ಮಕ್ಕಳನ್ನು ಶಿಸ್ತಿಗೆ ಒಳಪಡಿಸಿದ ತಂದೆಗಳು, ತಮ್ಮ ಮಕ್ಕಳ ಉಜ್ವಲ ಭವಿಷ್ಯತ್ತನ್ನು ಬಯಸುವದಿಲ್ಲ. ಅವರನ್ನು ಪ್ರೀತಿಸುತ್ತೇನೆ ಎಂದು ಹೇಳಿದರೂ, ಯಥಾರ್ಥವಾಗಿ ಅವರನ್ನು ಪ್ರಿತಿಸುತ್ತಿರುವದಿಲ್ಲ.

ವಚನಗಳು 7, 8 ರಲ್ಲಿ, ಮೊದಲ ಶತಮಾನದ ತಂದೆಗಳು ತನ್ನ ಮಗನನ್ನು ಶಿಸ್ತು ಪಡಿಸಲು ಸಮಯವನ್ನು ನಿಗದಿ ಮಾಡಿದ್ದನು ಎಂದು ನೋಡುತ್ತೇವೆ, ಆದರೆ ಅನೈತಿಕವಾಗಿ ಹುಟ್ಟಿದ ಮಗನನ್ನು ಶಿಸ್ತಿಗೆ ಒಳಪಡಿಸುತ್ತಿರಲಿಲ್ಲ. ಆ ದಿವಸಗಳಲ್ಲಿನ ನಿಯಮದ ಪ್ರಕಾರ ಸ್ವಂತ ಮಗನು ಮಾತ್ರ ಆಸ್ತಿಗೆ ಬಾಧ್ಯಸ್ಥಗಾರನಾಗಿದ್ದನು, ತಂದೆಯು ತನ್ನ ಸ್ವಾಸ್ಥ್ಯವನ್ನು ಆ ಮಗನಿಗೆ ಮಾತ್ರ ನೀಡುತ್ತಿದ್ದನು. ಆದ್ದರಿಂದ ಅವನ ನೈತಿಕ ಮಗನು ತಂದೆಯ ಆಸ್ತಿಯನ್ನು ಹೊಂದಿಕೊಂಡು ನಂಬಿಗಸ್ತನಾಗಿರಬೇಕಿತ್ತು.

ವಚನ 10ರಲ್ಲಿ, ಲೋಕದ ತಂದೆಗಳಲ್ಲಿರುವ ನ್ಯೂನತೆಯನ್ನು ತಿಳಿಸಲಾಗಿದೆ. ಉತ್ತಮನಾದ ತಂದೆಯೂ ಸಹ ತನ್ನ ತಿಳುವಳಿಕೆಗನುಗುಣವಾಗಿ ಮಾತ್ರ ತನ್ನ ಮಕ್ಕಳನ್ನು ಶಿಸ್ತಿಗೆ ತರುತ್ತಿದ್ದನು. ತನ್ನ ಮಕ್ಕಳಿಗೆ ಉತ್ತಮವಾದದ್ದನ್ನೇ ಬಯಸುತ್ತಿದ್ದನು ಅವನೂ ಸಹ ತಪ್ಪುಗಳನ್ನು ಮಾಡುವ ಸಾಧ್ಯತೆಯಿತ್ತು (ನಾನು ಉತ್ತಮ ತಂದೆಯಾಗಿರಬೇಕೆಂದು ಪ್ರಯತ್ನಿಸಿದರೂ, ನನ್ನದೇ ಆದ ತಪ್ಪುಗಳನ್ನು ಮಾಡಿರು ವೆನು) ತಂದೆಯು ತನ್ನ ಅಸಾಹಯಕ ಪರಿಸ್ಥಿತಿಯಲ್ಲೂ, ತನ್ನ ಮಕ್ಕಳನ್ನು ಉತ್ತಮ ಸ್ಥಿತಿಗೆ ತರಲು "ಬಾಲ ಶಿಕ್ಷೆಯನ್ನು, ಬಾಲೋಪದೇಶವನ್ನು," ಮಾಡುವವನಾಗಿರಬೇಕು (ಎಫೆಸ 6:4).

**ಪರಲೋಕದ ತಂದೆ**

ನಮಗಿರುವಂತ ನ್ಯೂನತೆಗಳನ್ನು ಹೊಂದದೆ ಇರುವ ತಂದೆಯ ಬಗ್ಗೆ ಆಲೋಚಿಸೋಣ. ಏಕೆ ದೇವರು ನಮ್ಮನ್ನು ಶಿಕ್ಷಿಸುತ್ತಾನೆ? ವಚನ 7-11ರಲ್ಲಿ ಮೂರು ಕಾರಣಗಳನ್ನು ನೀಡಲಾಗಿದೆ.

(1) ನಾವು ಆತನ ಮಕ್ಕಳಾಗಿರುವದರಿಂದ ನಮ್ಮನ್ನು ಶಿಕ್ಷಿಸುತ್ತಾನೆ (ವಚನ 7). ಆ ಶಿಕ್ಷೆಯು ನಮಗುಂಟಾಗದಿದ್ದರೆ, ನಾವು ಆತನ ಪುತ್ರರಲ್ಲ (ವಚನ 8).[5] ನಾವು ಆತನ ಮಕ್ಕಳಾಗಿರುವದರಿಂದ ಆತನ ಪ್ರೀತಿಗೆ ಪಾತ್ರರಾಗಿರುವೆವು (ವಚನ 6; ಜ್ಞಾನೋಕ್ತಿ 3:12; ಪ್ರಕಟಣೆ 3:19). ನಮಗೆ ಒದಗಿ ಬರುವ ಕಷ್ಟ ಹಿಂಸೆಗಳು, ದೇವರು ನಮ್ಮನ್ನು ಇಷ್ಟ ಪಡುವದಿಲ್ಲ[6] ಎಂಬ ಸೂಚನೆ ಎಂಬದು ಕೆಲವರ ಅಭಿಪ್ರಾಯ, ಆದ್ದರಿಂದ ಆತನು ನಮ್ಮನ್ನು ದ್ವೇಷಿಸುತ್ತಾನೆ ಎಂದು ತಿಳಿಯುತ್ತಾರೆ. ಆದರೆ ಇಬ್ರಿಯ ಬರಹಗಾರನು ಇದಕ್ಕೆ ತದ್ವಿರುದ್ಧವಾದ ಹೇಳಿಕೆಯನ್ನು ನೀಡಿ. ಶಿಕ್ಷೆಯು ದೇವರ ಪ್ರೀತಿಯ ದ್ಯೋತಕವಾಗಿದೆ ಎಂದಿರುವನು.

(2) ಆತನು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. ನಮ್ಮನ್ನು ಬಲಪಡಿಸುವದಕ್ಕಾಗಿ ಶಿಕ್ಷಿಸುತ್ತಾನೆ, ಅದರಿಂದ ಸಹಿಸುವಿಕೆ ಉಂಟಾಗುತ್ತದೆ (ವಚನ 7). ಹಾಗೂ ನಮ್ಮನ್ನು ಉತ್ತಮ ಜನರನ್ನಾಗಿ ಮಾಡಲು ಶಿಕ್ಷಿಸುತ್ತಾನೆ. ಆತನ ಪರಿಶುದ್ಧತೆಯಲ್ಲಿ ಪಾಲುಗಾರರಾಗಲು ಶಿಕ್ಷಿಸುತ್ತಾನೆ (ವಚನ 10). ಅದರಿಂದ ನೀತಿಯೆಂಬ ಪ್ರತಿಫಲವಾಗುತ್ತದೆ (ವಚನ 11).

(3) ನಾವು ಜೀವಿಸಬೇಕೆನ್ನುತ್ತಾನೆ (ವಚನ 9ಎ) - ನಿತ್ಯವಾದ ಹಾಗೂ ಸಮೃದ್ಧವಾದ ಜೀವತವನ್ನು ಜೀವಿಸಬೇಕೆಂದು ಬಯಸುತ್ತಾನೆ (ಯೋಹಾನ 10:10ಬಿ). ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ (1 ಕೊರಿಂಥ 11:32). ದೇವರು ಕೇವಲ ನಾವು ಸಂತೋಷದಿಂದ ಇರಬೇಕೆಂದು ಬಯಸದೆ ನಮ್ಮನ್ನು ಪರಲೋಕಕ್ಕಾಗಿ ಸಿದ್ಧಪಡಿಸುತ್ತಾನೆ.[7]

## ಈ ವಿಚಾರಕ್ಕೆ ನಮ್ಮ ಪ್ರತಿಕ್ರಿಯೆ ಏನು?

ಕರ್ತನ ಶಿಕ್ಷೆಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು? ಪ್ರಶ್ನೆಯನ್ನು ಬೇರೆ ವಿಧದಲ್ಲಿ

ಕೇಳೋಣ: ಅನಗತ್ಯವಾದದ್ದನ್ನು ಅನುಭವಿಸುವಾಗ, ಇಷ್ಟವಲ್ಲದ್ದು, ಬರುವಾಗ, ಅಥವಾ ಅಹಿತವಾದದ್ದು ಸಂಭವಿಸುವಾಗ, ಅವುಗಳನ್ನು ಹೇಗೆ ಎದುರಿಸೋಣ?[8]

**ಲೌಕಿಕ ತಂದೆಯರು**

ಪ್ರೀತಿಸುವ ತಂದೆಯ ಶಿಕ್ಷೆಯನ್ನು ಮಗುವು ಹೇಗೆ ಸ್ವೀಕರಿಸುತ್ತದೆ? ಅನೇಕ ಮಕ್ಕಳು ತಮ್ಮನ್ನು ಶಿಕ್ಷಿಸುವ ತಂದೆಯರಿಗೆ ಸನ್ಮಾನವನ್ನು ನೀಡುತ್ತಾರೆ.[9] ತಂದೆಗಳು ತಮ್ಮ ಮಕ್ಕಳಿಗೆ ನೀತಿ ಬೋಧೆಯನ್ನು ಹೇಗೆ ಶಿಕ್ಷಿಸಬೇಕು ಎಂದು ಹಳೆ ಒಡಂಬಡಿಕೆಯಲ್ಲಿ ಬರೆದದೆ (ಜ್ಞಾನೋಕ್ತಿ 13:1; 19:20). ಇದರ ನಿಮಿತ್ತವಾಗಿ ಉಜ್ವಲ ಭವಿಷ್ಯವನ್ನು ಅವರುಗಳು ಹೊಂದಲು ಸಾಧ್ಯವಿದೆ (ಇಬ್ರಿಯ 12:11ಬಿ).

**ಪರಲೋಕದ ತಂದೆ**

ಲೌಕಿಕ ತಂದೆಯರನ್ನೇ ಇಷ್ಟಾಗಿ ಗೌರವಿಸುವಾಗ, ಪ್ರೀತಿಸುವ ಪರಲೋಕ ತಂದೆಯನ್ನು ಎಷ್ಟೋ ಹೆಚ್ಚಾಗಿ ಗೌರವಿಸಬೇಕಲ್ಲವೇ (ವಚನ 9)? ತಮ್ಮ ಹಿಂಸೆಗಳನ್ನು ಆನಂದಿಸಬೇಕೆಂದು ಬರಹಗಾರನು ತಿಳಿಸದೆ (ವಚನ 11ಎ),[10] ಒಳ್ಳೆಯ ಮನೋಭಾವವನ್ನು ಹೊಂದಬೇಕೆಂದು ಹೇಳಿದನು. ಶಿಕ್ಷೆಗೆ ಉತ್ತಮವಾದ ಪ್ರತಿಕ್ರಿಯೆಯನ್ನು ವಚನ 5ರಲ್ಲಿ ತಿಳಿಸಿರುವನು:

ಕರ್ತನ ಶಿಕ್ಷೆಯನ್ನು ಕುರಿತು ಬೈಬಲು ಏನನ್ನು ಬೋಧಿಸುತ್ತದೋ ಅದನ್ನು *ಮರೆಯಬೇಡ* (ವಚನ 5ಎ). ಹಿಂಸೆಯಿಂದ ಭಾದಿತರಾಗುವಾಗ ಈ ವಾಕ್ಯದಲ್ಲಿನ ಸತ್ಯಾಂಶಗಳನ್ನು ಮರೆಯ ಬೇಡಿರಿ:

1. ದೇವರು ನಿಮ್ಮನ್ನು ಪ್ರೀತಿಸುತ್ತಾನೆ.
2. ಶಿಕ್ಷೆಯು, ಪುತ್ರನು ಎಂಬುದಕ್ಕೆ ಪುರಾವೆಯಾಗಿದೆ.
3. ನಮಗೆ ಸಂಭವಿಸುವವೆಲ್ಲವು ನಾವು ಉತ್ತಮರಾಗುವಂತೆ ಮಾಡುತ್ತವೆ.

*"ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ"* (ವಚನ 5ಬಿ). ಅದರಿಂದ ಏನನ್ನು ಕಲಿಯಬಹುದೆಂದು ಆಲೋಚಿಸು.

ಎಲ್ಲಕ್ಕಿಂತ ಹೆಚ್ಚಾಗಿ, "ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ" (ವಚನ 5ಸಿ). ಸಮಸ್ಯೆಗಳು ನಿನ್ನನ್ನು ಹಿಂಜರಿಯದಂತೆ ಮಾಡದಿರಲಿ, ಮುಂದೆ ಸಾಗಲು ಪ್ರೊತ್ಸಾಹವಿರಲಿ. "ಸಹಿಸುವಿಕೆಯ" ಉದ್ದೇಶದಿಂದ ಈ ಪತ್ರಿಕೆಯನ್ನು ಬರೆಯಲಾಗಿದೆ.

ನಮಗೆ ಶಿಕ್ಷೆ ಉಂಟಾಗುವಾಗ, ನಾವು ಅಧೀನರಾಗಬಹುದು ಅಥವಾ ಕಠಿಣರಾಗ ಬಹುದು. ದೀನರಾಗಬಹುದು ಅಥವಾ ಕೋಪಗೊಳ್ಳಬಹುದು. ಗೌರವದಿಂದ ಅಥವಾ ಅಗೌರವದಿಂದ ತುಂಬಲ್ಪಡಬಹುದು. ಇಬ್ರಿಯರ ಸವಾಲೇನೆಂದರೆ, "ಆತ್ಮಗಳ ತಂದೆಗೆ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಾಗಿದೆ" (ವಚನ 9ಬಿ) ಮತ್ತು "ಅದರಿಂದ ತರಬೇತಿ ಹೊಂದಿ" "ಸಮಾಧಾನಕರವಾದ ನೀತಿಯ ಫಲಗಳನ್ನು" ಪಡೆಯುವೆವು (ವಚನ 11).

ಡಗ್ ಮಾರ್ಟಿನ್‌ದಾಲೆಯವರು, ತಾವು ಬೋಧಿಸುತ್ತಿದ್ದ ಇಬ್ರಿಯ ಪಾಠದಲ್ಲಿ, "ಸಮಸ್ಯೆ ಉಂಟಾಗುವಾಗ, 'ಇದು ನನಗೇಕಾಯಿತು?' ಎಂದು ಹೇಳಿ ಜಾರಿಕೊಳ್ಳಬೇಡ." ಅದರ ಬದಲಾಗಿ, "ಇದು ನನ್ನನ್ನು ಹೇಗೆ ಉತ್ತಮ ವ್ಯಕ್ತಿಯನ್ನಾಗಿ ಮಾಡಬಹುದು?" ಎಂದು ಆಲೋಚಿಸು. ನಂತರ ಆತನು ಹೀಗೆ ಹೇಳಿದನು, "ನನಗೆ ಸಂಭವಿಸಿದ ಪ್ರತಿಯೊಂದರಲ್ಲೂ ನಾನು ಬಲವಂತನಾಗುವಂತೆ ಪ್ರತಿಕ್ರಿಯೆ ತೋರಿಸುತ್ತೇನೆ."[11]

---

**ಬೋಧಕರಿಗಾಗಿ ಟಿಪ್ಪಣಿ**

ಭಾದೆಗಳ ಕುರಿತಾಗಿರುವ ಚರ್ಚೆಯನ್ನು ಬರಹಗಾರನು ನೀಡಿರುವದಿಲ್ಲ. ಹಿಂಜರಿದು ಹೋಗಲು ಸಮಸ್ಯೆಗಳು ಕಾರಣವಾಗಬಾರದು ಎಂಬ ಚರ್ಚೆಯಷ್ಟೆ. ಶೋಧನೆಯ ಕುರಿತು ರೋಮಾಪುರ 5:3-5 ಮತ್ತು ಯಾಕೋಬ 1:2-4ನ್ನು ಗಮನಿಸಿ.

---

ಟಿಪ್ಪಣಿಗಳು

[1]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 97. [2]Also note Deuteronomy 11:2, 5. [3]ಸೈತಾನನು ಯೋಬನನ್ನು ಪರಿಕ್ಷಿಸಿದನು (ಯಾಕೋಬ 1, 2). [4]ಬಾಧೆಗಳ ಸಮಯದಲ್ಲಿ ನಾವುಗಳು ಒಂಟಿಗರಾಗಿರದೆ, ಅದನ್ನು ಸಹಿಸಲು ದೇವರು ಸಹಾಯವಾ ಗಿರುತ್ತಾನೆ (1 ಕೊರಿಂಥ 10:13). [5]ಬಾಧೆಗಳು, ನಾವು ದೇವರ ಮಕ್ಕಳು ಎಂಬುದಕ್ಕೆ ಪುರಾವೆಯಾಗಿರುವದಿಲ್ಲ. ಕ್ರೈಸ್ತರು ಅದನ್ನು ಎದುರಿಸಲೇ ಬೇಕು (ಅಪೊಸ್ತಲರ ಕೃತ್ಯಗಳು 14:22; 2 ತಿಮೋಥೆ 3:12). [6]ಯೋಬನ ಸ್ನೇಹಿತರು ಅವನ ಪಾಪವನ್ನು ಅರಿಕೆಮಾಡಲು ಹೇಳಿದರು. [7]ನಾವು ಆನಂದವಾಗಿರಲು ದೇವರು ಬಯಸುತ್ತಾನೆ. ನಾವು ಉತ್ತಮರಾಗಿ ಪರಲೋಕವನ್ನು ಬಯಸುವದು ಪ್ರಾಥಮಿಕ ಸಂಗತಿಯಾಗಿದೆ. [8]ಆ ಸಮಯದಲ್ಲಿ ಬಾಧೆಗಳ ಕುರಿತು ಹೆಚ್ಚು ಅರಿಯಲು ಸಾಧ್ಯವಿಲ್ಲ. [9]ಬಹುಶಃ ವಿನಾಯಿತಿ ಇರುತ್ತದೆ. [10]ಯಾಕೋಬನು ಹೀಗೆ ಬರೆದನು, "ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟುಮಾಡುತ್ತದೆಂದು ತಿಳಿದು ನೀವು ನಾನಾ ವಿಧ ವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದೆಂದು ಎಣಿಸಿರಿ (ಯಾಕೋಬ 1:2). ಆದರೆ ಶೋಧನೆಗಳ ಅಂತಿಮ ಪಲಿತಾಂಶಗಳನ್ನು ಯಾಕೋಬನು ಒತ್ತಿ ಹೇಳಿರುವನು (ವಚನಗಳು 3, 4). ಇಬ್ರಿಯ ಬರಹಗಾರರು ಹಲವು ಶೋಧನೆಗಳು ಸಂತೋಷದ ಸನ್ನಿವೇಶಗಳಾ ಗಿಲ್ಲವೆಂದು ಸೂಚಿಸಿದನು.

[11]Doug Martindale, class on Hebrews, Eastside church of Christ, Midwest City, Oklahoma, 2008.